ಹೀಗೆ ಕಲ್ಪಿಸಿಕೊಳ್ಳಿ. ವಿಶಾಲವಾದ ರಂಗಮಂದಿರವೊಂದರಲ್ಲಿ ನೂರಾರು ಪ್ರೇಕ್ಷಕರ ನಡುವೆ ಕುಳಿತಿದ್ದೀರಿ. ಕತ್ತಲು ಎಲ್ಲೆಲ್ಲೂ. ರಂಗದ ಮೇಲೆ ಯಾವ ನಾಟಕ ಶುರುವಾಗಲಿದೆ ಎಂಬುದು ಯಾರಿಗೂ ಗೊತ್ತಿಲ್ಲ. ಯಾವುದು? ಯಾವುದಂತೆ? ಇವತ್ತು ಯಾವ ನಾಟಕ ಆಡ್ತಾರಂತೆ? ಸಭಾಮಂದಿರದಲ್ಲಿ ಎಲ್ಲೆಡೆ ಚದುರಿಬಿದ್ದಿರುವ ಕುತೂಹಲ. ನಿಧಾನಕ್ಕೆ ರಂಗದ ಮೇಲೆ ಬೆಳಕೇರುವುದು. ರಾಜರ ಆಸ್ಥಾನದ ರಂಗಸಜ್ಜಿಕೆ. ಭೀಷ್ಮ, ದ್ರೋಣ, ಧೃತರಾಷ್ಟ್ರರು ಎತ್ತರದ ಗದ್ದುಗೆಯಲ್ಲಿ ಕುಳಿತಿದ್ದಾರೆ; ಯುಧಿಷ್ಠಿರನೂ, ದುರ್ಯೋಧನನೂ ಪಟದ ಮುಂದೆ. ಅತ್ತ ನೂರಾರು ಜನ. ಇತ್ತ ಐವರೇ. ಪಗಡೆಯಾಟ ಇನ್ನೇನು ಶುರುವಾಗಲಿದೆ.

ಓಹ್! ಅನ್ನಿಸುತ್ತದೆ ನಿಮಗೆ. ಇದು ಗೊತ್ತಿರುವ ಕಥೆ. ಇಡೀ ಮಹಾಭಾರತ ಕಥನದ ಸುರುಳಿ ನಿಮ್ಮ ಮನಸ್ಸಿನಲ್ಲಿ ಬಿಚ್ಚಿಕೊಳ್ಳುತ್ತದೆ. ಮುಂದೆ ಏನನ್ನು ನಿರೀಕ್ಷಿಸಬೇಕು ಎಂಬ ಕಳವಳವಿಲ್ಲದ, ಗೊತ್ತಿರುವ ಕಥೆಯನ್ನೇ ಇನ್ನೊಮ್ಮೆ ರಂಗದ ಮೇಲೆ ಕಾಣುವ ನಿರಾಳತೆ ನಿಮ್ಮನ್ನಾವರಿಸಿ ಕುರ್ಚಿಯ ಮೇಲೆ ಆರಾಮಾಗಿ ವಿರಮಿಸುತ್ತೀರಿ.

ಆಗ ಒಂದು ಪವಾಡ ನಡೆದುಬಿಡುತ್ತದೆ. ಮೊದಲ ಆಟದಲ್ಲೇ ಯುಧಿಷ್ಠಿರ ಗೆದ್ದುಬಿಡುತ್ತಾನೆ. ಏನಾಯ್ತು? ಏನಾಯ್ತಿದು? ಎಂಬ ಅಚ್ಚರಿ ಸಭೆಯಲ್ಲಿ. ಅಷ್ಟೇ ಅಲ್ಲ, ಒಂದಾದ ಮೇಲೊಂದರಂತೆ ಯುಧಿಷ್ಠಿರ ಪಗಡೆಯಾಟದಲ್ಲಿ ಗೆಲ್ಲುತ್ತಲೇ ಹೋಗುತ್ತಾನೆ. ಪಾಂಡವರ ಮುಖದ ಮೇಲಿನ ವಿಜಯ ನಿಮ್ಮ ಮುಖದ ಮೇಲೆ ಪ್ರತಿಫಲಿಸುವುದಿಲ್ಲ. ಹೀಗಾಗಬಾರದಲ್ಲ ಎಂಬ ದುಗುಡ. ಹೀಗಾದ್ರೆ ಮಹಾಭಾರತ ಹೇಗೆ ಮುಂದುವರೆಯುತ್ತೆ? ಎಂಬ ಕ್ಷೋಭೆ. ಹಾಗಾದ್ರೆ ಇವರು ಪಾಂಡವರೂ, ಕೌರವರೂ ಅಲ್ಲದೇನೂ ಇರಬಹುದು. ಇದು ಮಹಾಭಾರತದ ಕಥೆಯೇ ಅಲ್ಲದಿರಬಹುದು. ಇದು ಬೇರೇನೇ ಕಥೆ ಎಂದುಕೊಳ್ಳುತ್ತ ನಿಮ್ಮ ಬೆನ್ನು ನೇರವಾಗುವುದು. ಯಾವ ಕಥೆ ಇದು ಎಂಬ ಕೌತುಕ. ಅಥವಾ ನನಗೆ ಗೊತ್ತಿಲ್ಲದ ಮಹಾಭಾರತ ಕಥೆಯೊಂದಿದೆಯೇ? ಎಂಬ ದ್ವಂದ್ವ. ನಾಟಕ ಪೂರ್ತಿ ಮುಗಿವ ತನಕ ಕಾಯ್ದು ನೋಡದೇ ಬೇರೆ ನಿರ್ವಾಹವಿಲ್ಲ ಎಂಬ ಬೆರಗು ಮಿಶ್ರಿತ ಅಸಹಾಯಕತೆಯ ಜತೆ ನಾಟಕವನ್ನು ಒಳಗೆಳೆದುಕೊಳ್ಳುತ್ತ ಹೋಗುತ್ತೀರಿ.

ರಂಗದ ಮೇಲೆ ಯುಧಿಷ್ಠಿರ ಆಟವನ್ನು ಗೆದ್ದುಬಿಡುವ ಇಂಥ ಕ್ಷಣದಲ್ಲೇ ಒಂದು ನಿಗೂಢ ಅಡಗಿದೆ. ಅದು ಕಥೆಯ ಬಗ್ಗೆ ನಮ್ಮ ನಿರೀಕ್ಷೆ, ಕುತೂಹಲವನ್ನೂ


ಯಾಂತ್ರಿಕ ತಂತ್ರಜ್ಞಾನದ ಪ್ರಭಾವಳಿ ಮನುಷ್ಯನ ಸಂವೇದನೆಗಳ ಆರ್ದ್ರತೆಯನ್ನೂ ಒಳಗೊಳ್ಳಬಹುದೇ?

2  25

## ಎಐ ವಿಡಿಯೊ! ಇದು ಜಾಗೃತಿಯ ಸಮಯ

**ವಿಕಿಪೀಡಿಯಾ,**
ಕಂಟೆಂಟ್ ಕ್ರಿಯೇಟರ್ (VickyPedia Kannada)

ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ (ಎಐ) ತಂತ್ರಜ್ಞಾನದಲ್ಲಿ ಮಿತಿ ಮೀರಿದ ಬದಲಾವಣೆಗಳು ಆಗುತ್ತಿದ್ದು, ಇದಕ್ಕೆ ಕಡಿವಾಣ ಹಾಕಬೇಕಿರುವುದು ಇಂದಿನ ತುರ್ತುಗಳಲ್ಲಿ ಒಂದು. 2025ರಲ್ಲಿ ಸರ್ಕಾರ ಈ ನಿಟ್ಟಿನಲ್ಲಿ ಗಮನ ಹರಿಸಬೇಕಿದೆ.

ನೈಜವಾಗಿಯೇ ವಿಡಿಯೊ ಚಿತ್ರೀಕರಿಸಿದಂತೆ ಎಐ ವಿಡಿಯೊ ರಚಿಸಿಕೊಡುತ್ತದೆ. ಅದು ಕೇವಲ ಒಂದೇ ಒಂದು ಟೆಕ್ಸ್ಟ್ ಪ್ರಾಂಪ್ಟ್‌ನಿಂದ! ಈ ಬೆಳವಣಿಗೆ ಆಶ್ಚರ್ಯದ ಜೊತೆಜೊತೆಗೆ ಭಯವನ್ನೂ ಹುಟ್ಟಿಸುವಂತಿದೆ.

ಡೀಪ್‌ಫೇಕ್ ವಿಡಿಯೊಗಳ ರಚನೆಯಲ್ಲಿ ಎಐ ತಂತ್ರಜ್ಞಾನವು ದಿನದಿಂದ ದಿನಕ್ಕೆ ವ್ಯಾಪಕವಾಗಿ ಬೆಳವಣಿಗೆಯಾಗುತ್ತಿದೆ. ಈ ಸಾಧನೆಯು ತಪ್ಪುದಾರಿ ಹಿಡಿದರೆ ಸಮಾಜದ ಸ್ವಾಸ್ಥ್ಯ ಹದಗೆಡುವುದರಲ್ಲಿ ಯಾವುದೇ ಆಶ್ಚರ್ಯವಿಲ್ಲ. ಯಾರದ್ದೋ (ಪ್ರಸಿದ್ಧ ವ್ಯಕ್ತಿಗಳ ವಾಯ್ಸ್ ಹೆಚ್ಚಾಗಿ ಬಳಕೆಯಾಗುತ್ತಿದೆ) ಧ್ವನಿ ಮಾದರಿಗಳನ್ನು ಮೂಲವಾಗಿಟ್ಟುಕೊಂಡು ಅದೇ ಮಾದರಿಯ ಧ್ವನಿಗಳನ್ನು ರೀಕ್ರಿಯೇಟ್ ಮಾಡುವ ತಂತ್ರಜ್ಞಾನವು ಸೋಷಿಯಲ್ ಮೀಡಿಯಾಗಳಲ್ಲಿ ದೊಡ್ಡ ಮಟ್ಟದ ಸದ್ದು ಮಾಡುತ್ತಿವೆ.

‘ಎಐ ವಿಡಿಯೊ’ ಹಾಗೂ ‘ಎಐ ವಾಯ್ಸ್ ಮಾಡ್ಯುಲೇಷನ್’ ಧ್ವನಿಯನ್ನು ಸೂಕ್ಷ್ಮವಾಗಿ ಗಮನಿಸದ ಹೊರತು ಅದರ ನೈಜತೆ ಅರಿವಿಗೆ ಬರುವುದಿಲ್ಲ. ಇದು ಟ್ರೋಲ್ ಮಾಡಲು ಬಳಕೆಯಾಗುತ್ತಿರುವುದು ದುರಂತವೇ ಸರಿ. ಎಐ ತಂತ್ರಜ್ಞಾನವು ಹೀಗೆ ಇನ್ನಷ್ಟು ಅಪ್‌ಡೇಟ್ ಅಥವಾ ಅಡ್ವಾನ್ಸ್ಡ್ ಆದಲ್ಲಿ, ಮುಂದಿನ ವರ್ಷಗಳಲ್ಲಿ ನೈಜ ಮತ್ತು ಎಐ ವಿಡಿಯೊಗಳನ್ನು ಗುರುತಿಸಲು ಕಷ್ಟವಾಗಲಿದೆ. ಇದರಿಂದ ಈಗಾಗಲೇ ದುರುಪಯೋಗಕ್ಕೆ ಬಳಕೆಯಾಗುತ್ತಿರುವ ಎಐ ವಿಡಿಯೊಗಳು ಮತ್ತಷ್ಟು ಅಬ್ಬರಿಸಲಿವೆ.

ಗಣ್ಯ ವ್ಯಕ್ತಿಯೊಬ್ಬರ ವಿಡಿಯೊವನ್ನು ಆಧಾರವಾಗಿಟ್ಟುಕೊಂಡು, ಅವರು ಹೇಳಿರದ ಮಾತನ್ನು ಅವರೇ ಹೇಳಿದ್ದಾರೆ ಅನ್ನುವ ರೀತಿಯಲ್ಲಿ ಬಿಂಬಿಸುವ ಕಾರ್ಯಗಳು ದೊಡ್ಡ ಜಾಲವಾಗಿ ನಡೆಯುತ್ತಿವೆ. ಇದೊಂದು ರೀತಿಯಲ್ಲಿ ಸಮುದಾಯ ಕ್ಷೋಭೆಗೆ ಬಳಕೆಯಾಗುತ್ತಿರುವುದಂತೂ ದುರಂತವೇ ಸರಿ. ದ್ವೇಷ ತೀರಿಸಿಕೊಳ್ಳಲು, ವೈಯಕ್ತಿಕ ತೇಜೋವಧೆಗೆ, ಮಾನಹಾನಿ ಮಾಡಲೂ ಎಐ ವಿಡಿಯೊಗಳು ರಚನೆಯಾಗುತ್ತಿವೆ. ಇಂಥ ವಿಡಿಯೊಗಳ ಬಗ್ಗೆ ಜಾಗೃತಿ ಅತ್ಯಗತ್ಯ.

ಎಐ ವಿಡಿಯೊಗಳ ಬಗ್ಗೆ ಸಾಮೂಹಿಕ ಜಾಗೃತಿ ಮೂಡಿಸುವ ಕೆಲಸವನ್ನು ಸರ್ಕಾರ ತುರ್ತಾಗಿ ತೆಗೆದುಕೊಳ್ಳಬೇಕು. ವಿಡಿಯೊಗಳ ನೈಜತೆ ಪರಿಶೀಲನೆ ಮಾಡುವ ಕುರಿತು ಜನರಲ್ಲಿ ಅರಿವು ಮೂಡಿಸಬೇಕು. ಅದರಲ್ಲೂ ಸಾಮಾನ್ಯ ಜನರಿಗೆ ಎಐ ವಿಡಿಯೊಗಳ ಬಗ್ಗೆ ತಿಳಿವಳಿಕೆ ಮೂಡಿಸಬೇಕು. ಎಐ ವಿಡಿಯೊಗಳು ಮಿತಿ ಮೀರದಂತೆ ಹಾಗೂ ದುರ್ಬಳಕೆಯಾಗದಂತೆ ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಳ್ಳಲೇಬೇಕಿದೆ.